

# ಅಚ್ಚಕನ್ಯೆ ಜಲಪಾತ

■ ಎಚ್.ಸಿ. ಶಿವಣ್ಣ ತುಪ್ಪದಮನೆ

ಪಶ್ಚಿಮ ಘಟ್ಟದ ರಮಣೀಯ ಜಲಪಾತವೊಂದು ತೀರ್ಥಹಳ್ಳಿ ತಾಲ್ಲೂಕಿನ ಗಡಿ ಪ್ರದೇಶವಾದ ಅರಳಸುರುಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

ಲಿಂಗನಮಕ್ಕಿ ಆಣೆಕಟ್ಟಿನ ಶರಾವತಿ ನದಿಯ ಉಗಮ ಸ್ಥಾನವೇ ಅಂಬುತೀರ್ಥ. ಇಲ್ಲಿಂದ ಹರಿಯುವ ಶರಾವತಿ ನದಿಯು 6 ಕಿ.ಮೀ. ದೂರದ ಅರಳಸುರುಳಿ ಗ್ರಾಮದ ಕಬ್ಬಿನಮಕ್ಕಿ ಎಂಬಲ್ಲಿ 30 ಅಡಿ ಎತ್ತರದ ಬಂಡೆ ಕಲ್ಲಿನ ಮೇಲಿಂದ ಕೆಳಕ್ಕೆ ಧುಮ್ಮಿಕ್ಕುತ್ತದೆ. ಜೋಗದ ಜಲಪಾತದ ಮಾದರಿಯಲ್ಲೇ ಧುಮ್ಮಿಕ್ಕುವ ಈ ನೀರು ನೋಡುಗರ ಕಣ್ಣಿಗೆ ಹಬ್ಬ. ಈ ಜಲಪಾತವನ್ನು ಗ್ರಾಮಸ್ಥರು ಅಚ್ಚಕನ್ಯೆ ಜಲಪಾತ ಎಂದು ಕರೆಯುತ್ತಾರೆ.

ಕೆಲವರು ಅಕ್ಕತಂಗಿಯರ ಜಲಪಾತ ಎಂದೂ ಹೇಳುತ್ತಾರೆ. ಚಳಿಗಾಲದ ರಾತ್ರಿಗಳಲ್ಲಂತೂ ಈ ಜಲಪಾತದ ಭೋರ್ಗರೆತ 2 ಕಿ.ಮೀ ವರೆಗೆ ಕೇಳಿಬರುತ್ತದೆ.  ಈ ಜಲಪಾತದ ವಿಶೇಷವೆಂದರೆ ಇದು ವರ್ಷದ 365 ದಿನಗಳೂ ಧುಮ್ಮಿಕ್ಕುತ್ತದೆ. ಮಳೆಗಾಲ ಆರಂಭವಾದ ಜೂನ್ ತಿಂಗಳಿನಿಂದ ಅಕ್ಟೋಬರ್ ತಿಂಗಳಿನವರೆಗೆ ನೀರಿನ ಹರಿವು ಹೆಚ್ಚಿದ್ದು ಪ್ರವಾಸ ಬರಲು ಸೂಕ್ತ ಸಮಯ.  ಪರಿಸರಕ್ಕೆ ಹಾನಿಯಾಗದಂತೆ ಇಲ್ಲಿ ಸಣ್ಣ ವಿದ್ಯುತ್ ಉತ್ಪಾದನಾ ಸ್ಥಾವರ ನಿರ್ಮಿಸುವ ಯತ್ನಗಳೂ ನಡೆಯುತ್ತಿವೆ ಎನ್ನಲಾಗುತ್ತಿದೆ. ಇಲ್ಲಿ ಕಿರುವಿದ್ಯುತ್ ಘಟಕ ಸ್ಥಾಪನೆಯಾದರೆ ನೊಣಬೂರು, ಅರಳಸುರುಳಿ ಗ್ರಾಮಗಳಿಗೆ ವಿದ್ಯುತ್ ಸೌಲಭ್ಯ ನೀಡಬಹುದು.

ಪ್ರವಾಸೋದ್ಯಮ ಇಲಾಖೆ ಈ ಮಾರ್ಗದ 2 ಕಿ.ಮೀ ಕಚ್ಚಾ ರಸ್ತೆಗೆ ಡಾಂಬರು ಹಾಕಿದರೆ ಪ್ರವಾಸಿಗರಿಗೆ ಅನುಕೂಲವಾಗಬಹುದು. ತೀರ್ಥಹಳ್ಳಿ–ಹೊಸನಗರ ಮುಖ್ಯ ರಸ್ತೆಗುಂಟ ಸಾಗಿದರೆ, ತೀರ್ಥಹಳ್ಳಿಯಿಂದ 22 ಕಿ.ಮೀ ದೂರದಲ್ಲಿ ಆರಗ– ನೊಣಬೂರು– ಅರಳಸುರುಳಿ ಸಿಗುತ್ತದೆ. ಅಲ್ಲಿನ ಗ್ರಾಮ ಪಂಚಾಯ್ತಿ ಕಛೇರಿ ಎದುರಿನಿಂದ ಕೇವಲ 2 ಕಿ.ಮೀ. ರಸ್ತೆಯ ದಾರಿ. ಮುಖ್ಯ ರಸ್ತೆಯಿಂದ ಪ್ರಕೃತಿ ಸೌಂದರ್ಯದ ಮಡಿಲಲ್ಲಿರುವ ಈ ಜಲಪಾತದ ರಸ್ತೆಗೆ ಡಾಂಬರೀಕರಣ ಆಗಿಲ್ಲ. ಅಚ್ಚಕನ್ಯೆ ಜಲಪಾತ ಇದೆ ಎಂಬ ನಾಮಫಲಕವೂ ಕಾಣಸುವುದಿಲ್ಲ. ದಾರಿಯುದ್ದಕ್ಕೂ ಅಲ್ಲಲ್ಲಿ ಕೇಳುತ್ತಾ ಮುಂದೆ ಸಾಗಬಹುದು.